# ಮಾರುತನೆ ಏಳೆಂದು

1. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchha Rayaru, page No. 167.
2. **Note:** This song is not available in other standard ref. books that I referred.
3. **Note:** Singer has followed these lyrics.

ರಾಗ: ಬಿಲಹರಿ ತಾಳ: ಝಂಪೆ

ಮಾರುತನೆ ಏಳೆಂದು ಎಬ್ಬಿಸಿದಳಂಜನೆಯು
ಶ್ರೀ ರಾಮ ಸೇವೆಗೆ ತಡವಾಯಿತೇಳು || ಪ ||

ಸೇತುಗಟ್ಟಲು ಬೇಕು ಶರಧಿ ದಾಟಲು ಬೇಕು
ಮಾತೆಗೆ ಉಂಗುರವ ಕೊಡಲು ಬೇಕು
ಪಾತಕಿ ರಾವಣನ ಶಿರವನರಿಯಲು ಬೇಕು
ಸೀತೆಪತಿ ರಾಮರಿಗೆ ನಮಿಸಬೇಕು || 1 ||

ಇಂತು ಕಳಿಯಲು ಬೇಕು ಅಜ್ಞಾತ ವಾಸವನು
ಪಂಥದಲಿ ಕೀಚಕರ ಒದೆಯ ಬೇಕು
ತಂತ್ರದಲಿ ಗೆಲಬೇಕು ಶಕುನಿ ದುರ್ಯೋಧನರ
ಕುಂತಿ ನಂದನನೆಂದು ಹೆಸರಾಗಬೇಕು || 2 ||

ಮಧ್ವ ರಾಯರು ಎಂದು ಪ್ರಸಿದ್ಧರಾಗಲು ಬೇಕು
ತಿದ್ದಿ ಹಾಕಲು ಬೇಕು ಸಕಲ ಗ್ರಂಥಗಳ
ಅದ್ವೈತ ವಾದಿಗಳ ಗೆದ್ದು ಕೆಡಹಲು ಬೇಕು
ಮುದ್ದು ಪುರಂದರ ವಿಠಲ ದಾಸನೆನಿಸಲು ಬೇಕು || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಮೊದಲು ಪರಮಾತ್ಮನ ಭಕ್ತರನ್ನು ಎಬ್ಬಿಸುವುದು ಆವಶ್ಯಕ ಆಚಾರವಾದುದರಿಂದ, ಇಲ್ಲಿ ಹನುಮಂತನನ್ನು ಅವನ ತಾಯಿಯಾದ ಅಂಜನೆ ಎಚ್ಚರಿಸಿದಂತೆ ದಾಸರು ಹಾಡಿದ್ದಾರೆ.

**ತಂತ್ರ** = ಕುಟಿಲ ರಾಜಕಾರಣ

**ತಿದ್ದಿ ಹಾಕು** = ಭಾಷ್ಯ ಬರೆದು ದ್ವೈತ ತತ್ವವನ್ನು ಸಮರ್ಥಿಸು.

**Classification:** Keerthane
**Ankita:** purandara vittala
**Location:** NA
**Category:** Hanuma Stuti, Madhwacharya Stuti
**Sub-Category:** hanuma, hanuma-bhima-madhwa, bhima, madhva, rama, madhwacharya, Samudra, ungura, ravana, sita, kichaka, kourava, kunti,
**Pravachana:** NA
**Explanation:** NA